

ಚೆಲುವೆ... ತನ್ನೊಳಗಿನ ಕಷ್ಟವನ್ನು ತೆರೆದಿಡುತ್ತಾ ಹೋದಳು. ಭಟ್ಟರು ಪೂಜೆ ಮಾಡುತ್ತಲೂ ಅವಳ ಮಾತುಗಳನ್ನು ಕೇಳಿಸಿಕೊಳ್ಳುತ್ತಲೂ ಹೊರಗೆ ಒಂದೇ ಸಮನೆ ಸುರಿಯುತ್ತಿದ್ದ ಮಳೆಯನ್ನು ನೋಡುತ್ತಲೂ, 'ಈ ಮಳೆ ಇಂದು ನಿಲ್ಲುವ ಲಕ್ಷಣ ಕಾಣದು' ಎನ್ನುತ್ತಲೂ ಅವಳ ಮಾತುಗಳನ್ನು ಕೇಳಿಸಿಕೊಳ್ಳುತ್ತಲೂ ಇದ್ದರು. 'ಹೇಳಿ ತಾಯಿ ಹೇಳಿ ಬಿಡಿ, ನೀವು ಹೇಳಬೇಕಾದುದೆಲ್ಲವನ್ನೂ ಹೇಳಿಬಿಡಿ' ಎಂದು ಅವಳನ್ನು ಮಾತಾಡಲು ಪ್ರೋತ್ಸಾಹಿಸುತ್ತಲೂ ಇದ್ದರು.

ಮಾತಾಡಿ ಮಾತಾಡಿ ಇನ್ನು ಹೇಳಬೇಕಾದುದೇನೂ ಇಲ್ಲ ಅನ್ನಿಸಿ, 'ಅಷ್ಟೆ, ದೇವಿಯ ಪಾತ್ರವನ್ನು ಮಾಡಲು ನನ್ನಿಂದಾಗದು' ಎಂದು ಎದ್ದಳು.

'ಮಾಡಬೇಕೆಂಬುದೇ ದೈವಸಂಕಲ್ಪವಾಗಿದ್ದರೆ?'

'ಹೇಳಿದೆನಲ್ಲ, ಸಂಕಲ್ಪ ಗಿಂಕಲ್ಪ ನಂಬಿ ಈವರೆಗೆ ಬದುಕು ಮಾಡಿದವಳಲ್ಲ.'

'ಸರಿ. ಇವನ್ನೆಲ್ಲ ಇಲ್ಲಿಗೇಕೆ ಬಂದು ಹೇಳುತ್ತಿದ್ದೀರಿ?'

'ತಿಳಿಯದು. ಬರಬೇಕೆನ್ನಿಸಿತು. ಬಂದೆ. ಬಂದು ನೋಡಿದರೆ ಅನಿಸುತ್ತಿದೆ: ದೇವಿ ಇದ್ದರೆ ಇಲ್ಲಿ ಇರುವುದು, ಇಂಥ ಜಾಗದಲ್ಲಿ. ನಿಮ್ಮ ಪೂಜೆಗೆ ಅವಳು ನಕ್ಕ ಹಾಗೆ, ನನ್ನ ಮಾತಿಗೂ ಅವಳು ಅತ್ತ ಹಾಗೆ ನನಗೆ ಕಾಣಿಸಿತು, ನನಗೆ ಅಷ್ಟು ಸಾಕು.'

'ಲೋಭಿಯಾಗಬೇಡಿ. ನಿಮಗೆ ಕಂಡಿದ್ದನ್ನು ನಾಕು ಜನಕ್ಕೂ ಕಾಣಿಸಿಬಿಡಿ. ಅಷ್ಟು ಸಾಕು. ನನ್ನ ದೇವಿಗೆ ಮುಗಿವ ಈ ಕೈಗಳಿಂದಲೇ ನಿಮಗೂ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ಹೇಳಬಲ್ಲೆ: ನೀವು ಮಾತ್ರವಲ್ಲ, ಜಗತ್ತಿನ ಎಲ್ಲ ಹೆಣ್ಣುಮಕ್ಕಳೂ ದೇವಿಯಾಗಲು ಅರ್ಹರು. ಅಲ್ಲ, ಅವರು ದೇವಿಯರೇ... ಇವತ್ತು ರಾತ್ರಿ ಉಳಿದು ನಾಳೆ ಬೆಳಿಗ್ಗೆ ಹೊರಟುಬಿಡಿ.'

ಇಲ್ಲ, ಏನು ಮಾಡಿದರೂ ಆಶಾದೇವಿ ಆ ರಾತ್ರಿ ಅಲ್ಲಿ ಉಳಿಯಲು ಒಪ್ಪಲಿಲ್ಲ. ಜಡಿಮಳೆಯಲ್ಲೇ ಆಕೆ ಹೊರಟುಬಿಟ್ಟಳು. 'ಇದು ಸತ್ಯವೇ, ಅವಳು ನಿಜಕ್ಕೂ ಇಲ್ಲಿ ಬಂದು ಅಷ್ಟೆಲ್ಲ ಹೇಳಿ ಹೋದಳೆ?' ಎಂದು ಭಟ್ಟರು ಅಚ್ಚರಿ ಪಡುವುದಿದೆ. ಇತ್ತೀಚೆಗೆ ಅವರು ಅವಳಿಗೆ ಪತ್ರ ಬರೆಯುವುದಾಗಲೀ, ಎಸ್.ಎಂ.ಎಸ್. ಕಳುಹಿಸುವುದಾಗಲೀ ಮಾಡಿಲ್ಲ. ■

# ಒಂದು ಹಳೆಯ ಕಾಗದ

ಶ್ರೀಧರ ಸಾಹಿತ್ಯಾಸಕ್ತನಲ್ಲ. ಖ್ಯಾತ ಕವಿಗಳ ಮಗನಾದುದರಿಂದ ಬೇಡ ವೆಂದರೂ ಒಂದಷ್ಟು ಕಥೆ, ಕವಿತೆಗಳ ಪರಿಚಯ ಅವನಿಗಿದೆ. ಕಳೆದ ಆರು ವರ್ಷಗಳಿಂದ ಅವನು ವಾಷಿಂಗ್ಟನ್‌ನಲ್ಲಿ ನೆಲೆಸಿರುವುದರಿಂದ ಇತ್ತೀಚಿನ ಸಾಹಿತ್ಯದ ಪರಿಚಯ ಅವನಿಗಿಲ್ಲ. ಹಾಗೆ ಹೇಳಿದಾಗ ಅವನ ತಂದೆ ನಕ್ಕು, 'ಅದರಿಂದ ನಿನಗೇನೂ ಹೆಚ್ಚು ನಷ್ಟವಾಗಿಲ್ಲ ಬಿಡು' ಎಂದುಬಿಟ್ಟಿದ್ದರು. ಹಾಗೆ ಅವರು ಹೇಳಿದ್ದು ಕಳೆದ ವರ್ಷ ಶ್ರೀಧರ ಕ್ರಿಸ್‌ಮಸ್ ರಜೆಯ ಹೊತ್ತಿಗೆ ಬೆಂಗಳೂರಿಗೆ ಬಂದಾಗ. ತಂದೆ ಆರೋಗ್ಯವಾಗಿಯೇ ಇದ್ದರು. ಇಷ್ಟು ಬೇಗ ಅವರು ಹೊರಟು ಹೋಗುವರೆಂದು ಶ್ರೀಧರ ಭಾವಿಸಿರಲಿಲ್ಲ. ಅವರು ತೀರಿಕೊಂಡ ಬಳಿಕ ಮುಗಿಸಬೇಕಾದ ಧಾರ್ಮಿಕ ವಿಧಿಗಳನ್ನೆಲ್ಲಾ ಮುಗಿಸಿದವನು ಅವರಿಲ್ಲದ ಈ ಹೊತ್ತಿನಲ್ಲಿ ಅವರ ಬರವಣಿಗೆಯ ಕೋಣೆಯಲ್ಲಿ ಆ ಮಧ್ಯಾಹ್ನ ಒಂಟಿಯಾಗಿ ಕುಳಿತ. ಅಪ್ಪ ಇದೇ ಕುರ್ಚಿಯ ಮೇಲೆ ಕುಳಿತು ಬರೆದ ಕವಿತೆಗಳೂ, ಇನ್ನಿತರ ಬರಹಗಳೂ ನಾಡಿನಲ್ಲೆಲ್ಲ ಸಂಚಲನ ಹುಟ್ಟಿಸುತ್ತಿದ್ದುದನ್ನು ನೆನೆದ. ಅವರ ಟೇಬಲ್ ಮೇಲೆ ಇದ್ದ ಪುಸ್ತಕಗಳನ್ನೂ, ಅರೆಬರೆ ಬರಹಗಳನ್ನೂ ನೋಡುತ್ತ ಅಪ್ಪ ಸಾಯುವಾಗ ಏನು ಬರೆಯಬೇಕೆಂದುಕೊಂಡಿದ್ದರೋ ಏನು ಓದಬೇಕೆಂದುಕೊಂಡಿದ್ದರೋ – ಅದು ಪೂರ್ತಿಯಾಗಿರದಿದ್ದರೆ ಅವರ ಜೀವನ ಆ ಅರ್ಥದಲ್ಲಿ ಅಪೂರ್ಣವೇ ಆಯಿತಲ್ಲವೆ? – ಎಂದುಕೊಂಡ. ಟೇಬಲ್ ಮೇಲೆ, ಪುಸ್ತಕಗಳೆಲ್ಲವುಗಳ ಕೆಳಗೆ ಕಾಣಿಸಿದ ಒಂದು ಫೈಲ್, ಅದರ ಮೇಲಿದ್ದ 'ಪತ್ರಗಳು' ಎಂಬ ಒಕ್ಕಣೆಯಿಂದ ಕುತೂಹಲ ಉಂಟುಮಾಡಿತು. ಈಗಲೂ ಪತ್ರ ಬರೆಯುವವರಿರುವರೆ? ಇದ್ದಾರು ಎನ್ನುತ್ತ ಫೈಲನ್ನು ಕೈಗೆತ್ತಿಕೊಂಡ. ಆ ಫೈಲಿನಲ್ಲಿ ಕಳೆದ ಶತಮಾನದ ನಡುವಿನ, ಕಡೆಯ ಕೆಲವು ವರ್ಷಗಳ ಪತ್ರಗಳನ್ನು ಅಪ್ಪ ಕ್ರಮವಾಗಿ ಜೋಡಿಸಿಟ್ಟಿದ್ದರು. ಅಂದರೆ ಇದಕ್ಕೂ ಮುಂದಿನ ವರ್ಷಗಳ ಪತ್ರವ್ಯವಹಾರಗಳ ಇನ್ನೊಂದು ಕಡತವಿರಬಹುದು ಅಥವಾ ಈ ನಡುವೆ ಅಷ್ಟೊಂದು ಪತ್ರವ್ಯವಹಾರಗಳು ಇರಲಿಕ್ಕೂ ಇಲ್ಲ ಅಂದುಕೊಂಡ ಶ್ರೀಧರ.

ಸಾಹಿತ್ಯ ಕೃತಿ, ತತ್ವಗಳ ಕುರಿತು ಸಾಹಿತಿ ಮಿತ್ರರೊಡನೆ ಅಪ್ಪ ನಡೆಸಿದ ಚರ್ಚೆಯ ಪಾತ್ರಗಳಾವುವೂ ಶ್ರೀಧರನ ಕುತೂಹಲ ಕೆರಳಿಸಲಿಲ್ಲ. ಅವುಗಳ ನಡುವೆ ಮಾಲಿನಿ ಎಂಬ ಮಹಿಳೆ ಬರೆದ ಪತ್ರ ಮಾತ್ರ ಬೇರೆಯದೇ ಬಗೆಯದಾಗಿತ್ತು. ಶ್ರೀಧರ ಉಸಿರು ಬಿಗಿಹಿಡಿದು ಓದತೊಡಗಿದ.

ನಾಡಿನ ಹಿರಿಯ ಕವಿಗಳೂ, ಆದರಣೀಯರೂ ಆದ ಕೈಲಾಸನಾಥರಿಗೆ,

ತಮ್ಮ ಸಾಹಿತ್ಯಾಭಿಮಾನಿ ಹಾಗೂ ಚಿರಪರಿಚಿತೆ ಮಾಲಿನಿಯ ಶಿ. ಸಾ. ನಮಸ್ಕಾರಗಳು.

ಈ ನಡುವೆ ಅನೇಕ ವರ್ಷಗಳಿಂದ ನಾನು ಪತ್ರ ಬರೆದಿಲ್ಲ. ಆದುದರಿಂದ 'ಚಿರಪರಿಚಿತೆ' ಎಂದು ಹೇಳಿಕೊಳ್ಳುವಾಗಲೂ ಕವಿಗಳಿಗೆ ನನ್ನ ಹೆಸರು ನೆನಪಿನಲ್ಲುಳಿದಿರಬಹುದೇ? ಎಂಬ ಸಂದೇಹವೂ ಇದ್ದೇ ಇದೆ. ಇರಲಿ, ಹಾಗಾಗಿ ಕೆಲವು ಹಿಂದಿನ ಸಂಗತಿಗಳನ್ನು ನೆನಪಿಸುತ್ತೇನೆ.

ತಮ್ಮ 'ಮಧುರಚಂದ್ರಮ' ಎಂಬ ಕೃತಿ ಪ್ರಕಟವಾದಾಗ ನಾನು ಕಾಲೇಜು ಓದುತ್ತಿದ್ದೆ. ಹದಿಹರಯದ ಮನಸುಗಳನ್ನು ಅರಳಿಸುವ ಆ ಸಂಕಲನದ ಒಂದೊಂದು ಕವಿತೆಯೂ ನಾಡಿನಾದ್ಯಂತ ತುಂಬಾ ಹೆಸರು ಪಡೆಯಿತು. ನಿಮ್ಮ ಎಷ್ಟೋ ಹಾಡುಗಳನ್ನು ನಾನು ಹಾಡಿದ್ದೇನೆ. ಆ ದಿನಗಳಲ್ಲಿ ನಡೆದ ಸಭಾ ಕಾರ್ಯಕ್ರಮಗಳಲ್ಲಿ ನಿಮ್ಮ ಈ ಸಂಕಲನದ ಹಾಡುಗಳನ್ನು ಯಾರಾದರೂ ಹಾಡಿಯೇ ಇರುತ್ತಿದ್ದರು. ತರುಣ ತರುಣಿಯರ ಮನಸ್ಸನ್ನು ನೀವು ಅಪಹರಿಸಿದ್ದಿರಿ. ನೀವು ಭಾಗವಹಿಸಿದ ಕವಿಗೋಷ್ಠಿಗಳ ನೆನಪು ಈಗಲೂ ಮನಸಿಗೆ ಮುದ ಕೊಡುವಂಥದು.

ನೀವು ಬರೆದ ಹಾಡುಗಳನ್ನು ಹಾಡುತ್ತ ನಾನು ನಿಮ್ಮನ್ನು ಪ್ರೀತಿಸತೊಡಗಿದೆ! ನಿಮ್ಮ ಕವಿತೆಗಳಲ್ಲಿ ಬರುವ ನವಯೌವನದ ಜೋಡಿ ನಾವೇ ಯಾಕಾಗಬಾರದು? ಹಾಗೆ ಕಲ್ಪಿಸಿಕೊಳ್ಳುತ್ತ ನಾನೂ ಪದ್ಯ ಬರೆಯತೊಡಗಿದೆ. ಯಾಕೋ ಸರಿ ಹೋಗಲಿಲ್ಲ. ನಿಮಗೆ ಪ್ರೇಮಪತ್ರಗಳನ್ನು ಬರೆಯತೊಡಗಿದೆ. ಭಯ ಪಡಬೇಡಿ, ಅದಾವುದನ್ನೂ ಪೋಸ್ಟ್ ಮಾಡಲಿಲ್ಲ. ತಾವು ಆಗಲೇ ವಿವಾಹಿತರೆಂದು ತಿಳಿಯಿತು, ಸುಮ್ಮನಾದೆ. ಅವನ್ನೆಲ್ಲ ನೆನೆದರೆ ಈಗ ನಗು ಬರುತ್ತದೆ. ಇನ್ನೂ ಒಂದು ವಿಷಯ. ನಾನು ಪ್ರೀತಿಸುತ್ತಿದ್ದುದು ನಿಮ್ಮ ಕವಿತೆಗಳಲ್ಲಿ ಒಡಮೂಡುತ್ತಿದ್ದ ನಾಯಕನನ್ನು. ಅವನು ಬೇರೆಯೇ ವ್ಯಕ್ತಿ ತಾನೇ? 'ನಾನೇ ಬೇರೆ, ಅಂಬಿಕಾತನಯದತ್ತನೇ ಬೇರೆ' ಎಂದು ಬೇಂದ್ರೆಯವರೇ ಹೇಳಿದ್ದಾರಲ್ಲ. ಆದ್ದರಿಂದ ನಾನು ಪ್ರೀತಿಸಿದ್ದು ನಿಮ್ಮನ್ನು ಎನ್ನುವಾಗಲೂ ಆ ನೀವು – ನೀವಲ್ಲ ಎಂಬುದೂ ನೆನಪಿನಲ್ಲಿರಲಿ!

ಇರಲಿ, ಇವೆಲ್ಲ ಬೇಡದ ಮಾತು. ಆದರೂ ತಿಳಿಯಬೇಕಾದ ವಿಷಯ. ನಿಮ್ಮ ಹೆಸರನ್ನು ನನ್ನ ಮಗನಿಗಿಟ್ಟಿದ್ದೇನೆ. ಮಧುರ ಕವಿತೆಗಳನ್ನು ಕೊಟ್ಟು ನಾಡಿನ ಜೀವನದ ಮಧುರತೆಯನ್ನು